**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 954/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ದಿನಾಂಕಃ** 17.08.2026 **ಸಿಡಬ್ಲ್ಯೂ 1**

| | |
|---|---|
| ಹೆಸರು | ಶ್ರೀಮತಿ ವನಜಾಕ್ಷಮ್ಮ |
| ಗಂಡನ ಹೆಸರು | ಮಂಜಪ್ಪ |
| ವಯಸ್ಸು | 31 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ ಸ್ಥಳ | ಹಂಪಸಾಗರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನಗೆ 1 ನೇ ಆರೋಪಿಯೊಂದಿಗೆ ನಾನು 16 ವರ್ಷದವಳಿದ್ದಾಗ ನನ್ನ ಮದುವೆಯನ್ನು ಹರಿಹರದಲ್ಲಿ ಮಾಡಿರುತ್ತಾರೆ. ಒಂದು ವರ್ಷಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದು ನಂತರ ನಾನು ಗರ್ಭಿಣಿಯಾದಾಗ ನನ್ನನ್ನು ಆರೋಪಿತರು ಹೊಡೆದು ತವರುಮನೆಗೆ ಕಳಿಸಿರುತ್ತಾರೆ. ನಂತರ ನನ್ನನ್ನು ಗಂಡನ ಮನೆಗೆ ಕರೆದುಕೊಂಡು ಹೋಗಿದ್ದು ಮತ್ತೆ ನನಗೆ ಹೊಡೆಯುವುದು ಬಡಿಯುವುದು ಚಿತ್ರಹಿಂಸೆ ನೀಡುವುದನ್ನು ಮಾಡುತ್ತಿದ್ದರು. ನಾನು ನನ್ನ ಚಿಕ್ಕಪ್ಪನ ಮಕ್ಕಳು ದೊಡ್ಡಪ್ಪನ ಮಕ್ಕಳನ್ನು ಮಾತನಾಡಿಸಿದರೆ ಅಕ್ರಮ ಸಂಬಂಧ ಹೊಂದಿದೆಯಾ ಎಂದು ನನಗೆ ಮಾನಸಿಕವಾಗಿ ದೈಹಿಕವಾಗಿ ಹಿಂಸೆ ನೀಡುತ್ತಿದ್ದರು. ಕೆಲಸಕ್ಕೆ ಹೋಗುತ್ತೇನೆ ಅಂತ ಹೇಳಿ ನನ್ನ ಗಂಡ ಹೊರಗಡೆ ಹೋಗುತ್ತಿದ್ದರು ನಂತರ ನಾನು ವಾಶ್ ರೂಂನಲ್ಲಿದ್ದಾಗ ನನ್ನನ್ನು ಹೊರಗಡೆಯಿಂದ ವಾಚ್ ಮಾಡುತ್ತಿದ್ದರು. ನಾನು ಹೊರಗಡೆ ಬಂದು ಹೊರಗಡೆ ಏನು ಮಾತನಾಡುತ್ತೀರಾ, ಒಳಗಡೆ ಬಂದು ಮಾತನಾಡಿ ಅಂತ ಹೇಳಿದ್ದಕ್ಕೆ ಆರೋಪಿತರು ನನಗೆ ಹೊಡೆ ಬಡೆ ಮಾಡಿರುತ್ತಾರೆ. ನಂತರ ನನ್ನ ತಾಯಿ, ತಮ್ಮ ನನ್ನನ್ನು ಕರೆದುಕೊಂಡು ಬಂದು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನನ್ನ ಕೈ ಕಾಲು ಮುರಿದಿರುತ್ತದೆ. ನಾನು ಆಸ್ಪತ್ರೆಯಲ್ಲಿ 15 ದಿವಸ ಚಿಕಿತ್ಸೆ ಪಡೆದಿರುತ್ತೇನೆ. ನಾನು ನನ್ನ ತಮ್ಮನ ಜೊತೆ ಫೋನ್ ನಲ್ಲಿ ಮಾತನಾಡಿದರೆ ನಿನ್ನ ತಮ್ಮನ ಜೊತೆ ಇದೆಯಾ ಎಂದು ಚಿತ್ರಹಿಂಸೆ ನೀಡುತ್ತಿದ್ದನು. ನನ್ನ ಗಂಡ ತನ್ನ ಮೊಬೈಲ್ ನಲ್ಲಿ ಏನನ್ನೊ ನೋಡಿ ಕೊಂಡು ಬಂದು ನನಗೆ ಚಿತ್ರಹಿಂಸೆ ನೀಡಿರುತ್ತಾನೆ. ಸುಮಾರು 3 ವರ್ಷಗಳ ಹಿಂದೆ ರಾತ್ರಿ 11.30 ಗಂಟೆಗೆ ಕುಡಿದಿದ್ದು ಇಳಿದಿದೆ ಇವಳನ್ನು ನೋಡಿಕೊಂಡು ಇರು ಎಂದು ನನ್ನ ಅತ್ತೆಗೆ ಹೇಳುತ್ತಿದ್ದನು. ನಾನು ನಂತರ ಹೊರಗಡೆ ಇದ್ದವರ ಹತ್ತಿರ ಫೋನ್ ನನ್ನು ಇಸಿದುಕೊಂಡು ನನ್ನ ತವರು ಮನೆಗೆ ಫೋನ್ ಮಾಡಿ ನನ್ನ ತವರು ಮನೆಗೆ ಹೋಗಿರುತ್ತೇನೆ. ನನಗೆ ಇಬ್ಬರು ಗಂಡು ಮಕ್ಕಳು ಮತ್ತು ಒಂದು ಹೆಣ್ಣುಮಗು ಇರುತ್ತದೆ ಅವರನ್ನು ನಾನೇ ನೋಡಿಕೊಳ್ಳುತಿದ್ದೇನೆ. ಆರೋಪಿತರು ನನಗೆ ತುಂಬಾ ಹಿಂಸೆ ನೀಡುತ್ತಿದ್ದರು. ಆರೋಪಿತರು ನನಗೆ ಬಟ್ಟೆ ಬಿಚ್ಚಿಸಿ ನೆಲಕ್ಕೆ ಕೆಡವಿ ಎಲ್ಲೆಂದರಲ್ಲಿ ಹೊಡೆಯುವುದು ಬಡಿಯುವುದು ಮಾಡುತ್ತಿದ್ದರು. ನಂತರ ನಾನು ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ನಂತರ

ಪೋಲೀಸರು ನಮ್ಮ ಊರಿಗೆ ಬಂದಿದ್ದು ನಾನು ಸ್ಥಳವನ್ನು ತೋರಿಸಿರುತ್ತೇನೆ ಅವರು ಮಹಜರ್ ಮಾಡಿರುತ್ತಾರೆ. ನಾನು ಈ ಹಿಂದೆ ನ್ಯಾಯಾಲಯಕ್ಕೆ ಬಂದಿದ್ದು ನನ್ನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಪೋಟೋಗಳು ನಿಪಿ.4, 5 ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 164 ರಲ್ಲಿ ನೀಡಿದ ಹೇಳಿಕೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ.6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.1 ಒಂದು ಕಬ್ಬಿಣದ ರಾಡನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ಆರೋಪಿತರು ನನಗೆ ಚಿತ್ರಹಿಂಸೆ ನೀಡುತ್ತಿದ್ದರಿಂದ ನನ್ನ ತವರುಮನೆಯವರಾದ ಮಂಜಪ್ಪ, ಅಧ್ಯಕ್ಷರು, ಪೂಜಾರ್ ನಾಗೇಶಪ್ಪ ಮತ್ತು ಇತರರು ಬಂದು ರಾಜಿ ಪಂಚಾಯ್ತಿ ಮಾಡಿ ಬುದ್ಧಿವಾದ ಹೇಳಿ ಹೋಗುತ್ತಿದ್ದರು. 2 ದಿನ ಮಾತ್ರ ಚೆನ್ನಾಗಿದ್ದು ನಂತರ ಕುಡಿದು ಬಂದ ಹೊಡೆಯುತ್ತಿದ್ದರು ಎಂದರೆ ಸರಿ. ದಿಃ16.08.2023 ರಂದು ರಾತ್ರಿ 11.30 ರ ಸಮಯದಲ್ಲಿ ನನ್ನ ಅತ್ತೆ ಗಂಡ ಇಬ್ಬರೂ ನಾನು ಅಕ್ರಮ ಸಂಬಂಧ ಇಟ್ಟುಕೊಂಡಿದ್ದೇನೆ ಎಂದು ಮಾತನಾಡುತ್ತಿದ್ದಾಗ ನಾನು ಕೇಳಿಸಿಕೊಂಡು ಹೊರಗೆ ಯಾಕೆ ಮಾತನಾಡುತ್ತಿದ್ದೀರಾ ಒಳಗೆ ಬಂದು ಮಾತನಾಡಿ ಅಂತ ಹೇಳಿದ್ದಕ್ಕೆ ಇಬ್ಬರು ಏಕಾಏಕಿಯಾಗಿ ಬಾಗಿಲು ಹಾಕಿಕೊಂಡು ಚೆನ್ನಾಗಿ ಬೈದು ನನ್ನ ತಾಳಿಯನ್ನು ಕಿತ್ತು ಹಾಕಿ ಬಟ್ಟೆಗಳನ್ನು ಕಿತ್ತು ನೆಲದ ಮೇಲೆ ಉರುಳಿಸಿಕೊಂಡು ನನ್ನ ಕಾಲು ಕೈಗಳನ್ನು ಹಿಡಿದುಕೊಂಡರು, ನನ್ನ ಗಂಡ ಅಲ್ಲೇ ಇದ್ದ ಕಬ್ಬಿಣದ ರಾಡಿನಿಂದ ನನ್ನ ಎಡಗಾಲಿಗೆ, ಎಡಗೈಗೆ ಹಾಗೂ ಮೈಮೇಲೆ ಬಾಸುಂಡೆ ಬರುವ ಹಾಗೆ ಹಾಗೂ ರಕ್ತಗಾಯಗಳಾಗುವ ಹಾಗೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ ಗಲಾಟೆಯಾದ ಮೇಲೆ ನಾನು ನನ್ನ ತವರುಮನೆಯವರಿಗೆ ಪೋನ್ ಮಾಡಿದ್ದರಿಂದ ನನ್ನನ್ನು ಓಮಿನಿ ವ್ಯಾನಲ್ಲಿ ಕರೆದುಕೊಂಡು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಸೇರಿಸಿದರು ಎಂದರೆ ಸರಿ. ಆರೋಪಿತರು ನನಗೆ ಕಬ್ಬಿಣದ ರಾಡಿನಿಂದ ಹೊಡೆದಿರುತ್ತಾರೆ ಎಂದು ಪೋಲೀಸರಿಗೆ ತೋರಿಸಿದ್ದು ಪೋಲೀಸರು ಅದನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ದಿಃ22.09.2023 ರಂದು ಗ್ರಾಮಾಂತರ ಪೋಲೀಸರಿಗೆ ಮದುವೆ ಕಾಲಕ್ಕೆ ತೆಗೆದ ಪೋಟೋಗಳನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮದುವೆ ಕಾಲಕ್ಕೆ ತೆಗೆದ 4 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.7 ರಿಂದ 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಆರ್ ಎ ವಕೀಲರಿಂದಃ

ನಾನು ಪಿಎಸ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಪ್ರತಿತಿಂಗಳು ರೂ.10,000/- ಸಂಬಳ ಕೊಡುತ್ತಾರೆ. ನಾನು ಯಾವುದೇ ವಿದ್ಯಾಭ್ಯಾಸ ಮಾಡಿಲ್ಲ. ನಾನು 16 ನೇ ವಯಸ್ಸಿನಲ್ಲಿದ್ದಾಗ 1 ನೇ ಆರೋಪಿಯೊಂದಿಗೆ ಮದುವೆ ಮಾಡುವಾಗ ನನ್ನ ಒಪ್ಪಿಗೆ ತೆಗೆದುಕೊಂಡಿರುವುದಿಲ್ಲ. ನನ್ನ ಮದುವೆಯನ್ನು ಹನುಮಂತಪ್ಪ, ರೇವಣಪ್ಪ ನಿಂತು ಮಾಡಿರುತ್ತಾರೆ. ನಾನು ಆ ಸಮಯದಲ್ಲಿ ವಿರೋಧ ಮಾಡಿ ಪೋಲೀಸರಿಗೆ ದೂರು ಕೊಟ್ಟಿರುವುದಿಲ್ಲ. ನಾನು 1 ನೇ ಆರೋಪಿತರ ಇಷ್ಟವಿಲ್ಲವೆಂದು ಹೇಳಿರುವುದಿಲ್ಲ, ಸಾಕ್ಷಿ ಮುಂದುವರೆದು ನನ್ನನ್ನು ಯಾರೂ ಕೇಳಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಒಂದು ವರ್ಷ ನನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು 2-3 ತಿಂಗಳು ಮಾತ್ರ ನೋಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಗಂಡ ಒಂದುವರೆ ವರ್ಷಗಳ ಕಾಲ ಚೆನ್ನಾಗಿದ್ದೆವು. ನಾನು ಮಹಿಳಾ ಸಂಘಕ್ಕೆ ದೂರು ಕೊಟ್ಟಿರುತ್ತೇನೆ ಆಗ ಆರೋಪಿತರು ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಹೇಳಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಆ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಅತ್ತೆಗೆ ಬಿಪಿ ಶುಗರ್ ಇದೆ ಎಂದರೆ ಸಾಕ್ಷಿಯು ಮೊದಲು ಚೆನ್ನಾಗಿದ್ದರು ಎಂದು ಉತ್ತರಿಸುತ್ತಾರೆ. ನನ್ನ ಅತ್ತೆ ದೇವರ ಸೇವೆ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಅತ್ತೆ ಯಾವುದೇ ಹಿಂಸೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ಠಾಣೆಯಲ್ಲಿ ತಯಾರಿಸಿರುತ್ತಾರೆ. ದೂರನ್ನು ರಮೇಶ ಎಂಬ ಪೋಲೀಸರು ಟೈಪ್ ಮಾಡಿರುತ್ತಾರೆ. ಅದರ ಮೇಲೆ ಅವರ ಸಹಿ ಇಲ್ಲ ಎಂದರೆ ಸರಿ. ದೂರನ್ನು ನಾನು ಟೈಪ್ ಮಾಡಿಕೊಂಡು ಬಂದಿರಿತ್ತೇನೋ ಅಥವಾ ಪೋಲೀಸರು ಟೈಪ್ ಮಾಡಿರುತ್ತಾರೋ ಎಂದು 3 ವರ್ಷಗಳಾಗಿರುವುದರಿಂದ ನನಗೆ ನೆನಪಿರುವುದಿಲ್ಲ. ನಾನು ಯಾವ ದಿನಾಂಕದಂದು ದೂರು ನೀಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಾನು ನನ್ನ ದೂರಿನಲ್ಲಿ 1 ವರ್ಷ 1 ನೇ ಆರೋಪಿಯೊಂದಿಗೆ ಸಂಸಾರ ಮಾಡಿರುತ್ತೇನೆಂದು ಬರೆಸಿರುತ್ತೇನೆ. ಮಂಜಪ್ಪ ಅಧ್ಯಕ್ಷರು ಮತ್ತು ಪೂಜಾರ್ ನಾಗೇಶಪ್ಪ ಬುದ್ದಿವಾದ ಹೇಳಿ ಚೆನ್ನಾಗಿ ಸಂಸಾರ ಮಾಡಿ ಎಂದು ಕಳಿಸಿರುತ್ತಾರೆ ಎಂದರೆ ಸರಿ. ಆ ದಿನ 7 ಗಂಟೆಯಿಂದ ರಾತ್ರಿ 11.30 ಗಂಟೆವರೆಗೆ ಗಲಾಟೆಯಾಗಿರುತ್ತದೆ. ನಾನು 11.30 ಮೇಲೆ ಆರೋಪಿತರು ನನಗೆ ಹೊಡೆದಿರುತ್ತಾರೆಂದು ಹೇಳಿರುವುದಿಲ್ಲ. ಆ ರೀತಿ ದೂರು ನೀಡಿಲ್ಲ ಎಂದರೆ ಸರಿ. ಆ ರೀತಿ ಪೋಲೀಸರು ಬರೆದಿದ್ದರೆ ಅದು ಸುಳ್ಳು ಎಂದರೆ ಸರಿ.

ಮಹಜರ್ ಸಾಕ್ಷಿದಾರರು ನಮ್ಮ ಊರಿನವರು ಎಂದರೆ ಸರಿ. ಅವರ ಪರಿಚಯ ಇರುತ್ತದೆ ಎಂದರೆ ಸರಿ. ಅವರು ಊರಿನ ಹಿರಿಯರಾಗಿರುವುದರಿಂದ ಸಹಾಯ ಮಾಡಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ಅವರು ಮಹಜರ್ ಸಾಕ್ಷಿಯಾಗಿ ನನಗೆ ಸಹಾಯ ಮಾಡಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ಮಹಜರ್ ಯಾವ ಸಮಯದಲ್ಲಿ ಯಾವ ದಿನಾಂಕದಂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಯಾವ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ ಎಂದು ಪೋಲೀಸರಿಗೆ ಮಾಹಿತಿ ನೀಡಿರುತ್ತೇನೆ ದಾಖಲೆ ಕೊಟ್ಟಿರುತ್ತೇನೆ. ಆಸ್ಪತ್ರೆಯಲ್ಲಿ ದಾಖಲಾಗಿರುವುದಿಲ್ಲ ಯಾವುದೇ ದಾಖಲೆ ಪೋಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಮಹಜರ್ ಯಾರು ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾನು ಕಬ್ಬಿಣದ ರಾಡನ್ನು ತೆಗೆದು ಇಟ್ಟ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಾನು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆದಿರುವುದಿಲ್ಲ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆ ನನಗೆ ಇಷ್ಟವಿಲ್ಲದ ಕಾರಣ ನಾನು ಆರೋಪಿತರಿಗೆ ಬೈಯುವುದು ಹೊಡೆಯುವುದು ಮಾಡುತಿತದ್ದರು ಎಂದರೆ ಸರಿಯಲ್ಲ. ನನ್ನ ಅಣ್ಣತಮ್ಮಂದಿರು

ಆರೋಪಿತರಿಗೆ ಹೊಡೆದಿರುತ್ತಾರೆಂದು ದೂರು ನೀಡಲು ಹೋಗಿದ್ದರು ಎಂದರೆ ಸರಿಯಲ್ಲ. ನಾನು ಸಂಘದಲ್ಲಿ ಸಾಲ ಮಾಡಿದ್ದು ಅದನ್ನು ತೀರಿಸಿರುವುದಿಲ್ಲ ಅದನ್ನು ಆರೋಪಿತರು ತೀರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಕಬ್ಬಿಣದ ರಾಡಿನಿಂದ ಹೊಡೆದಿರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.